

# ನಾಚುವ ಮರಗಳು

ಮನುಷ್ಯರಂತೆ ಮರಗಳೂ ನಾಚಿಕೊಳ್ಳುತ್ತವೆಯೇ? ಒಂದನ್ನೊಂದು ಮುಟ್ಟಲು ಸಂಕೋಚ ಪಡುತ್ತವೆಯೇ? ಮರಗಳ ಮೇಲಾವರಣದಲ್ಲಿ ನಡೆಯುವ ಈ ಅಸಾಧಾರಣ ವಿದ್ಯಮಾನಕ್ಕೆ ಕಾರಣ ಏನಿರಬಹುದು?

■ **ಕೆ.ಎಸ್. ನಟರಾಜ್**



ಕೋವಿಡ್ ನಂತರದ ಯುಗದಲ್ಲಿ ಜನರಿಗೆ ತುಂಬ ಪರಿಚಿತವಾಗಿರುವ ಪದವೆಂದರೆ, 'ದೈಹಿಕ ಅಂತರ ಕಾಪಾಡಿಕೊಳ್ಳುವುದು'. ಪಕ್ಕದಲ್ಲಿದ್ದ ವ್ಯಕ್ತಿಗೆ ಇರಬಹುದಾದ ಕಾಯಿಲೆಯ ವೈರಸ್‌ಗಳಾಗಲೀ ಬ್ಯಾಕ್ಟೀರಿಯಾಗಳಾಗಲೀ ಹರಡದೆ ಇರಲು ಇದು ಅತ್ಯಂತ ಸುಲಭ ಉಪಾಯ.

ಟಿ.ಬಿ., ಪ್ಲೇಗ್, ಕಾಲರಾದಂಥ ಅಂಟು ಜಾಡ್ಯಗಳು ಹರಡದಂತೆ ತಡೆಯಲು ಹಿಪಾಕ್ರಟೀಸ್ (ಕ್ರಿ.ಪೂ. 400), ಗಿರೋಲಾಮೊ ಫ್ರಾಂಕೆಸ್ಟೊರೊ (ಕ್ರಿ.ಶ. 1500), ಲೂಯಿ ಪಾಶ್ಚರ್ (ಕ್ರಿ.ಶ. 1600) ಮುಂತಾದವರ ಕಾಲದಿಂದಲೂ ಅನುಸರಿಸುತ್ತಿದ್ದುದು ದೈಹಿಕ ಅಂತರ ಕಾಪಾಡಿಕೊಳ್ಳುವ ಇದೇ ವಿಧಾನವನ್ನೇ. ಆದರೆ ಇದನ್ನು ಅಳವಡಿಸಿಕೊಂಡವರಲ್ಲಿ ಕೇವಲ ಮನುಷ್ಯನೇ ಮೊದಲಿಗ ಎಂದುಕೊಳ್ಳಬೇಡಿ. ಪ್ರಾಣಿಗಳಲ್ಲಿ ಈ ವಿಧಾನ ಇದ್ದಿರಬಹುದು ಎಂದುಕೊಂಡಿರಾ? ಅದೂ ಅಲ್ಲ! ಮರಗಳು. ಕೆಲವು ಮರಗಳು ಅನೇಕ ಶತಮಾನಗಳಿಂದಲೂ ಈ ರೀತಿಯ ಅಂತರವನ್ನು ಕಾಪಾಡಿಕೊಳ್ಳುತ್ತಾ ಬಂದಿವೆ.

ದಟ್ಟ ಕಾಡುಗಳಿಗೆ ಹೋದಾಗ ಒಮ್ಮೆ ತಲೆ ಎತ್ತಿ ಮರಗಳ ಮೇಲ್ಭಾಗವನ್ನು ಗಮನವಿಟ್ಟು ನೋಡಿ. ಮರದ ಮೇಲ್ತುದಿಯ ಕೊಂಬೆಗಳ ಅಂಚಿನ ನಡುವೆ ಅಥವಾ ಅಕ್ಕಪಕ್ಕದ ಮರಗಳ ನಡುವೆ ಖಾಲಿ ಜಾಗಗಳಿಂದ ಕೂಡಿದ, ಕಾಲುವೆಗಳಂತೆ ಕಾಣುವ ಬಿರುಕುಗಳನ್ನು ಸ್ಪಷ್ಟವಾಗಿ ಕಾಣಬಹುದು. ಒಂದು ಮರ ಮತ್ತೊಂದನ್ನು ಮುಟ್ಟಲು ನಾಚಿಕೊಳ್ಳುತ್ತಿರುವಂತೆ ಕಾಣುವ ಈ ಮೇಲಾವರಣವನ್ನು ಡಾ. ಮೆಲ್ವಿಲ್ ಜಾಕೊಬ್ಸ್ ಎಂಬ ಅಮೆರಿಕದ ಮಾನವ ಶಾಸ್ತ್ರಜ್ಞ 'ವೃಕ್ಷಗಳ ಮೇಲಾವರಣದಲ್ಲಿ ಪ್ರದರ್ಶಿತವಾಗುವ ಲಜ್ಜೆ' ಎಂದು ಕರೆದರು. ಸರಳವಾಗಿ ನಾವಿದನ್ನು 'ವೃಕ್ಷ ಲಜ್ಜೆ' ಎನ್ನಬಹುದು. ಇಂಗ್ಲಿಷ್‌ನಲ್ಲಿ **'Crown shyness'** ಎನ್ನಲಾಗುತ್ತದೆ.

1920ರಿಂದಲೂ ಈ ಅಸಾಧಾರಣ ವಿದ್ಯಮಾನದ ಬಗ್ಗೆ ವಿಜ್ಞಾನಿಗಳು ಹೀಗೇಕೆ ಎಂದು ಆಗೀಗ ಚರ್ಚಿಸುತ್ತಲೇ ಬಂದಿದ್ದಾರೆ. ಆದರೆ ಯಾವುದೇ ಖಚಿತ ಕಾರಣವನ್ನು ನೀಡಲಾಗಿಲ್ಲ.

ಒಂದನ್ನೊಂದು ಮುಟ್ಟಿಸಿಕೊಳ್ಳಲು ಸಂಕೋಚಪಡುವ ರೆಂಬೆಕೊಂಬೆಗಳಿರುವ ಮರಗಳು ಎಲ್ಲೆಡೆ ಕಾಣಸಿಗುವುದಿಲ್ಲ. ಇಂತಹ ಸ್ವಭಾವವನ್ನು ಪ್ರದರ್ಶಿಸುವ ಕೆಲವು ವೃಕ್ಷಗಳೆಂದರೆ – ನೀಲಗಿರಿ ಮರಗಳು, ಕರ್ಪೂರದ ಮರಗಳು, ಹಲವು ಜಾತಿಯ ಪೈನ್ ಮರಗಳು. ಹಿಮಾಲಯದ ಅರಣ್ಯ ಪ್ರದೇಶಗಳಲ್ಲಿ, ಉತ್ತರಾಖಂಡದ ಕಾಡುಗಳಲ್ಲಿ ಇವನ್ನು ಯಥೇಚ್ಛವಾಗಿ ನೋಡಬಹುದು. ಅಷ್ಟು ದೂರವೇಕೆ? ಬೆಂಗಳೂರಿನ ಲಾಲ್‌ಬಾಗ್‌ನಲ್ಲಿಯೂ 'ವೃಕ್ಷ ಲಜ್ಜೆ'ಯನ್ನು ತೋರುವ ಹಲವಾರು ವೃಕ್ಷ ಪ್ರಭೇದಗಳಿವೆ. (ಉದಾ: ಬಿಳಿ ಬೂರುಗ ಮತ್ತು ನೀಲಗಿರಿ).

ಮರಗಳ ಲಜ್ಜೆಗೆ ವೈಜ್ಞಾನಿಕ ಕಾರಣಗಳನ್ನು ಹುಡುಕುವ ಗಂಭೀರ ಪ್ರಯತ್ನಗಳು 1950ರ ದಶಕದಲ್ಲಿ ಆರಂಭವಾದವು. ಆಸ್ಟ್ರೇಲಿಯಾದಲ್ಲಿ ಬೆಳೆಯುತ್ತಿದ್ದ ಯೂಕಲಿಪ್ಟಸ್ ಮರಗಳ ಮೇಲೆ ನಡೆದ ಒಂದು ಅಧ್ಯಯನದ ಪ್ರಕಾರ, ಗಾಳಿ ಬೀಸಿದಾಗ ಹೊಯ್ದಾಡುವ ಮರದ ತುದಿಗಳ ನಡುವೆ ಏರ್ಪಡುವ ಘರ್ಷಣೆಯಿಂದಾಗಿ, ತುದಿಯಲ್ಲಿರುವ ಚಿಗುರಿಗೆ ಹಾನಿಯುಂಟಾಗುತ್ತದೆ. ಹಾಗಾಗಿ ಆ ಭಾಗದಲ್ಲಿ ಬೆಳವಣಿಗೆ ಕುಂಠಿತವಾಗುತ್ತದೆ. ಒಂದು ರೆಂಬೆಗೂ ಮತ್ತೊಂದಕ್ಕೂ ಅಂತರ ಏರ್ಪಡುತ್ತಾ ಹೋಗುತ್ತದೆ. ದೂರದಿಂದ ನೋಡಿದಾಗ ಅದು ಒಣಗಿದ ಬರಡು ಭೂಮಿಯಲ್ಲಿನ ಬಿರುಕುಗಳಂತೆ ಕಾಣುತ್ತವೆ.

1984ರಲ್ಲಿ ವಿಜ್ಞಾನಿಗಳು ಕೋಸ್ಟರೀಕದ ನದೀ